## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ 235/2023

**ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಶಂಕರಪ್ಪ. ಜಿ.ಹೆಚ್ | ಸಿಡಬ್ಲ್ಯೂಃ 12 | ಪಿಡಬ್ಲ್ಯೂಃ 9 |
| ತಂದೆಯ ಹೆಸರು | ಹನುಮಂತಯ್ಯ | | |
| ವಯಸ್ಸು | 62 ವರ್ಷ | | |
| ಕೆಲಸ | ನಿವೃತ್ತ ASI, | | |
| ವಾಸಸ್ಥಳ | ಮೈಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ಜನವರಿ 2022 ರಿಂದ ಆಗಸ್ಟ್ 2023ರವರೆಗೆ ಹುಣಸೂರು ಪಟ್ಟಣ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01.02.2023 ರಂದು ಸಂಜೆ 6.00 ಗಂಟೆಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಿಂದ ಬಂದ ಗಾಯಾಳು ಮೆಮೊ ಮೇರೆಗೆ ಆಸ್ಪತ್ರೆಗೆ ಭೇಟಿಕೊಟ್ಟು ಅಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಚಾಸಾ-1 ರವರ ಹೇಳಿಕೆಯನ್ನು ಸಂಜೆ 6-15 ರಿಂದ 7-00 ಗಂಟೆಯವರೆಗೆ ದಾಖಲಿಸಿಕೊಂಡು 7.00 ಗಂಟೆಗೆ ಠಾಣೆಗೆ ವಾಪಸ್ಸಾಗಿ ಅದರ ಆಧಾರದ ಮೇಲೆ ಠಾಣಾ ಮೊ.ಸಂಃ 27/23ರಲ್ಲಿ ಪ್ರಕರಣ ದಾಖಲಿಸಿ ಪ್ರವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೆಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ದಾಖಲಿಸಿಕೊಂಡ ಹೇಳಿಕೆ ನಿಪಿ-3 ರಲ್ಲಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ದಿಃ 02.02.2023 ರಂದು ಸ್ಥಳ ಮಹಜರು ಮಾಡುವ ಸಲುವಾಗಿ ಪಂಚರಾದ ಚಾಸಾ-6 ಮತ್ತು 7 ರವರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ. ಸದರಿ ನೋಟಿಸನ್ನು ಈಗ ನೋಡುತ್ತಿದು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಂತರ ಸ್ಥಳಕ್ಕೆ ಭೇಟಿಕೊಟ್ಟು ಚಾಸಾ-2 ರವರು ಹಾಜರಿದ್ದು, ಸ್ಥಳ

ತೋರಿಸಿದ ಮೇರೆಗೆ ಪಂಚರಾದ ಚಾಸಾ–6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಸ್ಥಳ ಮಹಜರು ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಮಹಜರು ಸಮಯದಲ್ಲಿ ಚಾಸಾ–1 ರವರು ಹಾಜರುಪಡಿಸಿದ ಒಂದು ನೇರಳೆ ಬಣ್ಣದ ನೈಟಿ ಮತ್ತು ಚಾಸಾ–2ರವರು ಹಾಜರುಪಡಿಸಿದ ಹಳದಿ ಬಣ್ಣದ ಚೂಡಿದಾರ್ ಟಾಪನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ–1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ಮಹಜರು ಸಮಯದಲ್ಲಿ ಬಾವಚಿತ್ರಗಳನ್ನು ತೆಗೆದಿದ್ದೇನೆ. ಅವುಗಳನ್ನು ಈಗ ನೋಡುತ್ತಿದ್ದು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ನಂತರ ಠಾಣೆಗೆ ವಾಪಸ್ಸಾಗಿ ಸದರಿ ಮುದ್ದೆಮಾಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ– 2 ರಿಂದ 5 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿಃ 23.02.2023 ರಂದು ಆರೋಪಿಯು ಮಾನ್ಯ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾದ ಮೇರೆಗೆ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ದಿಃ 21.03.2023 ರಂದು ಚಾಸಾ–1 ರವರ ಮರುಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚೂಪಾದ ಒಂದು ಪೆನ್ನನ್ನು ಠಾಣೆಗೆ ಬಂದು ಹಾಜರುಪಡಿಸಿದ ಮೇರೆಗೆ ಪಂಚರಾದ ಚಾಸಾ–8 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 3 ರಿಂದ 3–35ರವರೆಗೆ ಮಹಜರು ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೆನೆ. ಸದರಿ ಮಹಜರನ್ನು ಈಗಾಗಲೇ ನಿಪಿ–7 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು. ಸದರಿ ಪೆನ್ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ–3 ನ್ನು ನೋಡಿ ಗುರುತಿಸುತ್ತಾರೆ. ಸದರಿ ಪೆನ್ನನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುತ್ತೇನೆ.

ದಿಃ 07.03.2023 ರಂದು ನ್ಯಾಯಾಯದಿಂದ ಕಳುಹಿಸಿಕೊಟ್ಟ ದಂ.ಪ್ರ.ಸಂ ಕಲಂ 164ರಡಿಯಲ್ಲಿ ದಾಖಲಿಸಿಕೊಂಡ ಚಾಸಾ–2 ರವರ ಹೇಳಿಕೆಯನ್ನು ಸ್ವೀಕರಿಸಿರುತ್ತೇನೆ. ದಿಃ 07.04.2023 ರಂದು ಗಾಯಾಳುಗಳಾದ ಚಾಸಾ–1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ–4 ಮತ್ತು 5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಮತ್ತು 5(ಬಿ) ಎಂದು ಗುರುತಿಸಲಾಯಿತು. ದಿಃ 21.03.2023ರಂದು ಚಾಸಾ–2 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ–10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10(ಎ)ಎಂದು ಗುರುತಿಸಲಾಯಿತು. ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ಆರೋಪಿಯ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. SN ವಕೀಲರಿಂದಃ**

ಯಾವುದೇ ಒಂದು ಆಸ್ಪತ್ರೆಯಲ್ಲಿ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಯಾರಾದರೂ ಚಿಕಿತ್ಸೆಗೆ ದಾಖಲಾಗಿದ್ದರೆ ತಕ್ಷಣ ಪೋಲೀಸ್ ಠಾಣೆಗೆ ಮಾಹಿತಿ ಬರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಸಂಜೆ 6 ಗಂಟೆಗೆ ಆಸ್ಪತ್ರೆಯಿಂದ ಮಾಹಿತಿ ಬಂತು. ಗಾಯಾಳು ನೀಡಿದ ಹೇಳಿಕೆಯ ಆಧಾರದ ಮೇಲೆ ಮಾತ್ರ ಪ್ರ.ವ.ವರದಿಯಲ್ಲಿ ಕಲಂಗಳನ್ನು ನಮೂದಿಸಲಾಗುತ್ತದೆ ಎಂದರೆ ಸರಿ. ಆಸ್ಪತ್ರೆಯಿಂದ ಮೆಮೊ ಬರುವ ಪೂರ್ವದಲ್ಲಿ ಈ ಪ್ರಕರಣದ ಯಾವುದೇ ಗಾಯಾಳು ನಮ್ಮ ಠಾಣೆಗೆ ಬಂದಿಲ್ಲ. ನಾನು ಮಹಜರಿಗೆ ಹೋದಾಗ ಸ್ಥಳದಲ್ಲಿ ಮು.ಮಾ–1 ಮತ್ತು 2 ಇರಲ್ಲಿಲ್ಲ. ಚಾಸಾ–1 ಮತ್ತು 2 ರವರು ಹಾಜರುಪಡಿಸಿದ್ದಾರೆ. ನಿಪಿ–2ರ ಬಾವಚಿತ್ರದಲ್ಲಿ ಮು.ಮಾ–1 ಮತ್ತು 2 ನೆಲದಲ್ಲಿ ಬಿದ್ದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸಾಕ್ಷಿದಾರರು ಹಾಜರುಪಡಿಸಿ ನೆಲದಲ್ಲಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಮು.ಮಾ–1 ಮತ್ತು 2 ಅನ್ನು ಚಾಸಾ–1 ಮತ್ತು 2 ರವರು ಹಾಜರುಪಡಿಸಿದ್ದಾರೆ. ಮು.ಮಾ–1 ಮತ್ತು 2 ರ ಬಟ್ಟೆಗಳು ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿ ಸಿಗುತ್ತವೆ ಎಂದರೆ ಗೊತ್ತಿಲ್ಲ. ಸಾಕ್ಷಿದಾರರು ಹಾಜರುಪಡಿಸಿದ್ದಾರೆ. ಹಾಜರುಪಡಿಸಿದ ನೈಟಿ ನೇರಳೆ ಬಣ್ಣದಲ್ಲ ಗುಲಾಬಿ ಬಣ್ಣದು ಎಂದರೆ ಸರಿಯಲ್ಲ.

ಮು.ಮಾ–1 ಮತ್ತು 2 ನ್ನು ಚಾಸಾ–1 ರವರು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಚೂಡಿದಾರ್ ಟಾಪ್ ಹರಿದು ಹೋಗಿತ್ತು. ನೈಟಿ ಹರಿದಿಲ್ಲ. ಚಾಸಾ–1 ಮತ್ತು 2 ರವರಿಗೆ ಅನುಕೂಲವಾಗಲೀ ಎಂದು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ರವರ ಹೇಳಿಕೆಯನ್ನು ನಾನೇ ಬರೆದಿದ್ದೇನೆ. ಚಾಸಾ–2 ರವರೊಂದಿಗೆ ಶಾಮಿಲಾಗಿ ಅವರ ಹೇಳಿಕೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ–4 ಮತ್ತು 5 ರ ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯಾಳುಗಳು ಯಾವಾಗ ಒಳರೋಗಿಯಾಗಿ ದಾಖಲಾದರು ಮತ್ತು ಬಿಡುಗಡೆಗೊಂಡರು ಎಂದು ಬರೆದಿಲ್ಲ. ಚಾಸಾ.1 ಮತ್ತು 2 ರವರಿಗೆ ಹಲ್ಲೆಯಾಗಿದ್ದಲ್ಲಿ ಅವರು ಒಳರೋಗಿಗಳಾಗಿ ಚಿಕಿತ್ಸೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ–4 ಮತ್ತು 5 ಅನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮು.ಮಾ–3 ಬರೆಯಲು ಉಪಯೋಗಿಸುವ ಪೆನ್ನು ಎಂದರೆ ಸರಿ. ಪೆನ್ನು ಯಾವ ಭಾಗದಲ್ಲಿ ಹರಿತವಾಗಿದೆ ಎಂದರೆ ಪೆನ್ನಿನ ಮುಂಭಾಗದಲ್ಲಿ ಹರಿತವಾಗಿದೆ. ನಾನು ಹೇಳುವ ರೀತಿಯಲ್ಲಿ ಪೆನ್ನು ಹರಿತವಾಗಿದ್ದರೆ ಬರೆಯಲು ಉಪಯೋಗಿಸುವಾಗ ಹಾಳೆ ಹರಿದುಹೋಗುತ್ತದೆ ಎಂದರೆ ಸರಿ. ಮು.ಮಾ–3ರ ಪೆನ್ನಿನಲ್ಲಿ ಬರೆದರೆ ಹಾಳೆ ಹರಿದು ಹೋಗುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ಮತ್ತು 2 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–3 ಅನ್ನು ಅಮಾನತ್ತುಪಡಿಸಿಕೊಳ್ಳುವಾಗ ಪಂಚ ಸಾಕ್ಷಿದಾರರಿಗೆ ನೋಟೀಸ್ ಕೊಟ್ಟಿದ್ದೇನೆ. ದಿಃ 21.03.2023 ರಂದು ನೋಟೀಸ್ ಕೊಟ್ಟಿದ್ದೇನೆ. ಚಾಸಾ–8 ಮತ್ತು 9 ರವರು ಮಧ್ಯಾಹ್ನ 3 ಗಂಟೆಗೆ ಠಾಣೆಗೆ ಬಂದಿದ್ದರು. ಮಹಜರನ್ನು 3 ರಿಂದ 3–30ರವರೆಗೆ ಮಾಡಲಾಗಿದೆ. ನೋಟೀಸನ್ನು ಮಹಜರು ಬರೆಯುವ ಪೂರ್ವದಲ್ಲಿಯೇ ಕೊಟ್ಟಿದ್ದೇನೆ. ಮಧ್ಯಾಹ್ನ 3 ಗಂಟೆಗೆ ಹಾಜರಾಗುವಂತೆ ನೋಟೀಸ್ ಕೊಟ್ಟಿದ್ದೇನೆ. ನೋಟಿಸನ್ನು ಠಾಣೆಯಲ್ಲಿಯೇ ಬರೆದು ಅಲ್ಲಿಯೇ ಕೊಟ್ಟು ಮಹಜರು ಕ್ರಮ ಜರುಗಿಸಿದ್ದೇನೆ. ನಿಪಿ–9ರ ನೋಟಿಸಿನಲ್ಲಿ ಸಂಜೆ 6 ಗಂಟೆಗೆ ಹಾಜರಿರಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆರೋಪಿ 3 ಗಂಟೆಗೆ ಬಂದಿದ್ದರಿಂದ ಅದೇ ಸಮಯದಲ್ಲಿ ಮಹಜರು ಕ್ರಮ ಜರುಗಿಸಿದ್ದೇನೆ. ಆರೋಪಿ ಹಾಜರುಪಡಿಸಿದ ಪೆನ್ನು ಮು.ಮಾ–3 ಅಲ್ಲ ಎಂದರೆ ಸರಿಯಲ್ಲ. ನಿಪಿ–7ರ ಮಹಜರಿನಲ್ಲಿ

cello pocket dot pen ಎಂದು ಬರೆಯಲಾಗಿದೆ. ಮು.ಮಾ–3 ಅನ್ನು ಸಾಕ್ಷಿಗೆ ತೋರಿಸಲಾಗಿ, cello power ಎಂದು ಬರೆಯಲಾಗಿದೆ. ಚಾಸಾ–1 ಮತ್ತು 2 ರವರಿಗೆ ಸಹಾಯವಾಗಲೀ ಎಂದು ಮು.ಮಾ–3 ಅನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮು.ಮಾ–3ರ ಪೆನ್ನಿನಿಂದ ಆರೋಪಿ ಹಲ್ಲೆ ಮಾಡಿ ಗಾಯವಾಗಿದೆ ಎಂದು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಠಾಣೆಯಲ್ಲಿ ಚಾಸಾ–2, 4 ಮತ್ತು 5 ರವರ ವಿರುದ್ಧ ದೂರು ಕೊಟ್ಟ ಬಗ್ಗೆ ಗೊತ್ತಿಲ್ಲ. ಸದರಿ ಪ್ರಕರಣದ ವಿಚಾರಣೆಯ ಸಲುವಾಗಿ ದಿಃ 21.03.2023 ರಂದು ಆರೋಪಿ ನಮ್ಮ ಠಾಣೆಗೆ ವಿಚಾರಣೆಗೆ ಹಾಜರಾಗಿದ್ದರು ಎಂದರೆ ಸರಿಯಲ್ಲ. ಈ ಕೇಸಿನ ವಿಚಾರಣೆಗೆ ಹಾಜರಾಗಿದ್ದರು. ನಿಪಿ–10 ನ್ನು ಸಂಜೆ 4 ಗಂಟೆಗೆ ತೆಗೆದುಕೊಂಡಿದ್ದೇನೆ. ಚಾಸಾ–2 ರವರು ಹಾಜರುಪಡಿಸಿದ ವಿಡಿಯೋ ರೇಕಾರ್ಡ್‌ನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಚಾಸಾ–2 ರವರು ವಿಡಿಯೋ ಹಾಜರುಪಡಿಸಿದ ಬಗ್ಗೆ ಅಂತಿಮ ವರದಿಯಲ್ಲಿ ಕಾಣಿಸಿದ್ದಿರಾ ಎಂದರೆ ಅವರ ಹೇಳಿಕೆಯನ್ನು ಆ ಬಗ್ಗೆ ಪಡೆದುಕೊಂಡಿದ್ದೇನೆ. ಯಾವುದಾದರು ವಸ್ತುವನ್ನು ತನಿಖೆಯ ಸಮಯದಲ್ಲಿ ಸ್ವೀಕರಿಸಿದಾಗ ಅದಕ್ಕೆ ಕ್ರಮ ಸಂಖ್ಯೆಯನ್ನು ನೀಡಲಾಗುತ್ತದೆ ಎಂದರೆ ಅದನ್ನು ಮಾಲುಪಟ್ಟಿಯಲ್ಲಿ ನಮೂದಿಸಿಲ್ಲ. ಸದರಿ ದಾಖಲೆ ಇದೆಯೇ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಇರಬಹುದು ಎಂದು ನುಡಿಯುತ್ತಾರೆ. ಪ್ರಮಾಣಪತ್ರದ ಜೊತೆಯಲ್ಲಿಯೇ ದಾಖಲೆಯನ್ನು ಹಾಜರುಪಡಿಸಬೇಕು ಎಂದರೆ ಸರಿ. ನಿಪಿ–2ರ ಬಾವಚಿತ್ರಕ್ಕೆ ಸಂಬಂಧಪಟ್ಟಂತೆ ಸಿಡಿ ಮಾಡಿದ್ದಿರಾ ಎಂದರೆ ಇಲ್ಲ. ಚಾಸಾ–2 ರವರ ಮಗಳ ಹೆಸರು ಪ್ರಶೀಲಾ. ನಿಪಿ–10 ರಲ್ಲಿ ಅದನ್ನು ನಮೂದಿಸಿಲ್ಲ. ನಿಪಿ–10 ಅನ್ನು ಠಾಣೆಯಲ್ಲಿ ನಾವು ತಯಾರಿಸಿದ್ದೇವೆ. ಚಾಸಾ–2 ರವರ ಮಗಳಹೆಸರನ್ನು ಕೇಳಿ ಬರೆದುಕೊಳ್ಳಲು ತೊಂದರೆ ಇತ್ತೇ ಎಂದರೆ ಇಲ್ಲ. ಚಾಸಾ–2 ರವರಿಗೆ ಸಂಬಂಧಿಸಿದ ಮೊಬೈಲನ್ನು ವಶಪಡಿಸಿಕೊಂಡಿದ್ದಿರಾ ಎಂದರೆ ಇಲ್ಲ. ಏನಾದರು ತೊಂದರೆ ಇತ್ತೆ ಎಂದರೆ ಇಲ್ಲ. ಮೊಬೈಲ್ನ ಪೋಟೋವನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಕಾವೇರಿ ಡಿಜಿಟಲ್ ಸ್ಟುಡಿಯೋ ಹುಣಸೂರು ಇದರ ಮಾಲಿಕರನ್ನು ವಿಚಾರಿಸಿದ್ದಿರಾ ಎಂದರೆ ಇಲ್ಲ. ಸದರಿ ಸ್ಟುಡಿಯೋದ ಮಾಲಿಕರ ಹೆಸರನ್ನು ತಿಳಿದು ನಮೂದಿಸಲು ತೊಂದರೆ ಇತ್ತೇ ಎಂದರೆ ತೊಂದರೆ ಇರಲಿಲ್ಲ. ವಿಡಿಯೋ ಮಾಡಿದವರನ್ನು ಮತ್ತು ಸಿಡಿ ಪ್ರಿಂಟ್ ಹಾಕಿದವರನ್ನು ಅಂತಿಮ ವರದಿಯಲ್ಲಿ

ಸಾಕ್ಷಿದಾರರನ್ನಾಗಿ ಸೇರಿಸಿದ್ದಿರಾ ಎಂದರೆ ಇಲ್ಲ. ಅವರನ್ನು ಸಾಕ್ಷಿದಾರರನ್ನಾಗಿ ಸೇರಿಸಲು ತೊಂದರೆ ಇರಲಿಲ್ಲ. ಸೃಷ್ಟಿ ಮಾಡಿಕೊಂಡು ಸಿ.ಡಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಸ್ಥಳ ಮಹಜರು ಮಾಡಿದ ಸ್ಥಳದ ದಕ್ಷಿಣ ದಿಕ್ಕಿಗೆ ಚಾಸಾ–1 ರವರ ಮನೆ ಬರುತ್ತದೆ. ನಿಪಿ–2ರ ಬಾವಚಿತ್ರದಲ್ಲಿ ಕಂಡು ಬರುವ ಕಾಂಪೌಂಡ್ ಚಾಸಾ–1 ರವರ ಮನೆಯದ್ದಾಗಿದೆ. ಚಾಸಾ–1 ರವರ ಮನೆಯ ಬಾಗಿಲಿಗೂ ಕಾಂಪೌಂಡಿಗೂ ಮಧ್ಯೆ ಅಂತರ ಇದೆ ಎಂದರೆ ಸರಿ. ಘಟನೆ ರಸ್ತೆಯಲ್ಲಿ ಆಗಿದೆ ಎಂದು ತೋರಿಸಲಾಗಿದೆ ಎಂದರೆ ಸರಿ. ನಿಪಿ–8ರ ಪ್ರ.ವ.ವರದಿಯ ಕಾಲಂ ನಂ.4ರಲ್ಲಿ ಘಟನಾ ಸ್ಥಳ ಫಿರ್ಯಾದುದಾರರ ಮನೆಯ ಮುಂಭಾಗ ಎಂದು ಬರೆದಿದೆಯೇ ಹೊರತು ರಸ್ತೆ ಎಂದು ಬರೆದಿಲ್ಲ ಎಂದರೆ ಸರಿ. ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ನಾನೇ ದಾಖಲಿಸಿಕೊಂಡಿರುತ್ತೇನೆ. ದಿಃ 02.02.2023 ರಂದು ಚಾಸಾ–4 ರವರು ನೀಡಿದ ಹೇಳಿಕೆಯನ್ನೇ ನಾನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿ. ಚಾಸಾ–4 ರವರು ನನ್ನ ಮುಂದೆ ಹೇಳಿಕೆ ನೀಡುವಾಗ ನನಗೆ ಯಾವುದೇ ಪೆಟ್ಟಾಗದೇ ಇದ್ದುದರಿಂದ ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು ಹೇಳಿದ್ದಾರೆ ಎಂದರೆ ಸರಿ. ಚಾಸಾ–4 ರವರಿಗೆ ಪೆಟ್ಟಾಗಿದ್ದಲ್ಲಿ ಆ ಬಗ್ಗೆ ನನ್ನ ಮುಂದೆ ಹೇಳಿಕೆ ನೀಡುತ್ತಿದ್ದರು ಎಂದರೆ ಸರಿ. ಮು.ಮಾ–3 ಅನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಇಬ್ಬರು ಪಂಚರಿದ್ದರು. ಆ ದಿನ ಚಾಸಾ–6 ಮತ್ತು 7 ರವರು ಇರಲಿಲ್ಲ. ಮು.ಮಾ–3ರ ಪೆನ್ನಿನಲ್ಲಿ ರಕ್ತದ ಕಲೆ ಇತ್ತೆ ಇಲ್ಲವೆ ಎಂದು ಖಚಿತಪಡಿಸಿಕೊಳ್ಳಲು ಪ್ರಯೋಗಾಲಯಕ್ಕೆ ಕಳುಹಿಸಿದ್ದಿರಾ ಎಂದರೆ ಇಲ್ಲ. ಮು.ಮಾ–3ರಿಂದ ಗಾಯವಾಗಿದ್ದಲ್ಲಿ ಅದನ್ನು ಪ್ರಯೋಗಾಲಯಕ್ಕೆ ಕಳುಹಿಸುತ್ತಿದ್ದೆ, ಅದು ಸೃಷ್ಟಿ ಮಾಡಿಕೊಂಡ ಮುದ್ದೆ ಮಾಲು ಎಂದರೆ ಸರಿಯಲ್ಲ. ದಿಃ16.01.2023 ರಂದು ಗಾಯದ ಪ್ರಮಾಣ ಪತ್ರ ನೀಡುವಂತೆ ವೈದ್ಯಾಧಿಕಾರಿಗೆ ಮನವಿ ಸಲ್ಲಿಸಿರುತ್ತೇನೆ. ಆ ದಿನಾಂಕದಂದು ಘಟನೆ ನಡೆದಿರಲಿಲ್ಲ ಎಂದರೆ ಸರಿಯಲ್ಲ. ರಾಜಕೀಯ ಪ್ರಭಾವಕ್ಕೆ ಒಳಪಟ್ಟು ಚಾಸಾ–1 ಮತ್ತು 2 ರವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ವಿನ್ನಿ ಥಾಮಸ್ ಗೊತ್ತು ಎಂದರೆ ಇಲ್ಲ. ಅವರು ಚಾಸಾ–1 ಮತ್ತು 2 ರವರೊಂದಿಗೆ ಠಾಣೆಗೆ ಬಂದಿದ್ದರು ಎಂದರೆ ಇಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ

ಎಂದರೆ ಸರಿಯಲ್ಲ. ನಿಪಿ–1ರ ಮಹಜರು ಮತ್ತು ನಿಪಿ–2ರ ಬಾವಚಿತ್ರಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಬಟ್ಟೆಯನ್ನು ಹರಿದು ಹಾಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನೀಡಿದ ಹೇಳಿಕೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮು.ಮಾ–3 ಅನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.